**SC No. 86/2025**
**PW-1**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 86/2025**

| | | |
|---|---|---|
| ಸಾಕ್ಷಿದಾರರ ಹೆಸರು | ಗೀತಾ | ಪ್ರಮಾಣ ವಚನ ಮಾಡಿದ ದಿನಾಂಕ: 01.04.2026 |
| ತಂದೆಯ/ಗಂಡನ ಹೆಸರು | ನಾಗರಾಜು | |
| ವಯಸ್ಸು | 45 ವರ್ಷ | |
| ವೃತ್ತಿ | ವ್ಯವಸಾಯ | ಪ್ರಾ.ಸಾಃ 01 |
| ವಾಸ ಸ್ಥಳ | ಮಲಾರ ಕಾಲೋನಿ | ಚಾ.ಸಾಃ 01 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಮೃತ ನಾಗರಾಜು ನನ್ನ ಗಂಡ ಇದ್ದರು. ಚಾಸಾ-13 ಸುಚಿತ್ರ ನನಗೆ ಮಗಳಾಗಬೇಕು. ನನಗೆ ಚಾಸಾ-2 ರಿಂದ 12 ಮತ್ತು 14 ಗೊತ್ತು. ಅದೇ ರೀತಿ 1 ನೇ ಆರೋಪಿ ರಂಗಸ್ವಾಮಿ ರವರ ಮಗ ಚಂದು ಸಹ ಗೊತ್ತು. ಚಂದು ಮತ್ತು ನನ್ನ ಮಗಳ ನಡುವೆ ಯಾವುದೇ ಪ್ರೀತಿ ಪ್ರೇಮ ಇರಲಿಲ್ಲ ಮತ್ತು ಆ ವಿಚಾರವಾಗಿ ಆರೋಪಿತರಿಗೂ ನನ್ನ ಗಂಡನಿಗೂ ಯಾವುದೇ ಗಲಾಟೆ ಆಗಿರುವುದಿಲ್ಲ ಮತ್ತು ಆರೋಪಿ 1 ರಿಂದ 9 ರವರು ನನ್ನ ಗಂಡನನ್ನು ಕಂಡಾಗಲೆಲ್ಲಾ ಮಗಳ ವಿಚಾರದಲ್ಲಿ ಬೈದಿರುವುದಿಲ್ಲ ಮತ್ತು ನನ್ನ ಗಂಡನಿಗೆ ಮಗಳ ಮದುವೆ ಮಾಡದೇ ತಿರುಗಾಡುತ್ತೀಯಾ ಏನಾದರೂ ಮಾಡಿಕೊಂಡು ಸಾಯಬಾರದೇ ಎಂದು ಅಂದಿದ್ದರ ಬಗ್ಗೆ ನನಗೆ ಗೊತ್ತಿರಲಿಲ್ಲ. ಆರೋಪಿತರು ಈ

ವಿಚಾರವಾಗಿ ನನ್ನ ಮನೆಯ ಹತ್ತಿರ ಬಂದು ಯಾವುದೇ ಜಗಳ ಮಾಡಿರಲಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರಲಿಲ್ಲ ನನ್ನ ಗಂಡನಿಗೆ ಪ್ರಚೋದನೆ ಆಗುವ ರೀತಿಯಲ್ಲಿ ಹೇಳಿರಲಿಲ್ಲ. ಆರೋಪಿತರು ನನ್ನ ಗಂಡನಿಗೆ ಪ್ರಚೋದನೆ ಮಾಡಿದ್ದರಿಂದ ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿರಲಿಲ್ಲ. ಆದರೆ ನನ್ನ ಗಂಡ ಮರಣ ಹೊಂದಿದ್ದು ಯಾವ ಕಾರಣಕ್ಕಾಗಿ ಮರಣ ಹೊಂದಿದರು ಎಂದು ನನಗೆ ಗೊತ್ತಿರುವುದಿಲ್ಲ.

ಪೊಲೀಸರು ನನ್ನ ಸಹಿಯನ್ನು ತೆಗೆದುಕೊಂಡಿದ್ದರು ಆರೋಪಿತರ ವಿರುದ್ಧವಾಗಿ ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದೂರನ್ನು ತೋರಿಸಲಾಯಿತು ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಈಗ ನೋಡುತ್ತಿರುವ ದಾಖಲೆ ಮೇಲಿರುವ ಸಹಿ ನನ್ನ ಗಂಡನ ಸಹಿ ಇರುತ್ತದೆಯೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ. ಸಾಕ್ಷಿದಾರರಿಗೆ ಡೆತ್ ನೋಟ್ ಅನ್ನು ನೋಡಿ ಗುರುತಿಸಿದ್ದು ಸಾಕ್ಷಿದಾರರು ಮೃತನ ಸಹಿಯನ್ನು ನೋಡಿ ಗುರುತಿಸಿರುವುದಿಲ್ಲ. ಪ್ರಕರಣದ ಇತ್ಯರ್ಥದ ಸಲುವಾಗಿ ಸದರಿ ದಾಖಲೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು

ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿದಾರರಿಗೆ ಡೈರಿಯನ್ನು ತೋರಿಸಲಾಯಿತು, ತಾನು ಈ ಡೈರಿಯನ್ನು ಪೊಲೀಸರಿಗೆ ಎಂದೂ ಕೊಟ್ಟಿರುವುದಿಲ್ಲ. ಪ್ರಕರಣದ ಇತ್ಯರ್ಥದ ಸಲುವಾಗಿ ಸದರಿ ಡೈರಿಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಸಹಿಗಳು ನನ್ನ ಸಹಿಗಳು ಇರುತ್ತವೆ. ಆ ಸಹಿಗಳನ್ನು ಪೊಲೀಸರು ಮನೆ ಹತ್ತಿರ ಬಂದು ಮಾಡಿಸಿಕೊಂಡಿದ್ದರು ಆದರೆ ಯಾವ ಕಾರಣಕ್ಕಾಗಿ ತೆಗೆದುಕೊಂಡಿದ್ದರು ಎಂದು ಗೊತ್ತಿರುವುದಿಲ್ಲ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಪೊಲೀಸ್ ನೊಟೀಸ್ ಮತ್ತು ಅಮಾನತ್ತು ಮಹಜರ್ ಇದ್ದು ಅವುಗಳನ್ನು ಕ್ರಮವಾಗಿ ನಿಪಿ-4, 4(ಎ), 5, 5(ಎ) ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿದಾರರು ನೋಡಿ ಗುರುತಿಸಿದಂತಹ ದಾಖಲೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆ ಇದ್ದು ಅದನ್ನು ನಿಪಿ-6 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಫೋಟೋಗಳಲ್ಲಿ ನಾನು ಇರುವುದಿಲ್ಲ ನನ್ನ ಮಗಳು ಇರುತ್ತಾಳೆ. ಪೊಲೀಸರು ನನ್ನ ಮರು ಹೇಳಿಕೆ ತೆಗೆದುಕೊಂಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು**

<u>ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:</u>**

ಚಾಸಾ-13 ಸುಚಿತ್ರ ನನ್ನ ಮಗಳು ಎಂದರೆ ಸರಿ. 1 ನೇ ಆರೋಪಿತನ ಮಗ ಚಂದು ಮತ್ತು ನನ್ನ ಮಗಳ ನಡುವೆ ಈಗ್ಗೆ 6 ತಿಂಗಳಿನಿಂದ ಒಬ್ಬರಿಗೊಬ್ಬರು ಪರಸ್ಪರ ಪ್ರೀತಿಸುತ್ತಿದ್ದರು ಎಂದರೆ ಸರಿಯಲ್ಲ. ಇದೇ ವಿಚಾರ ನನಗೆ ಮತ್ತು ನನ್ನ ಗಂಡನಿಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ದಿನಾಂಕ 11.11.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಆರೋಪಿತರಿಗೂ ಮತ್ತು ನನ್ನ ಗಂಡನಿಗೂ ಇದೇ ವಿಚಾರದಲ್ಲಿ ಗಲಾಟೆ ಆಗಿ ಮಾತಿಗೆ ಮಾತು ಆಗಿತ್ತು ಎಂದರೆ ಸರಿಯಲ್ಲ. ಆರೋಪಿ 1 ರಿಂದ 9 ರವರು ನನ್ನ ಗಂಡನನ್ನು ನೋಡಿದಾಗಲೆಲ್ಲಾ ಮಗಳ ವಿಚಾರದಲ್ಲಿ ಬಾಯಿಗೆ ಬಂದಂತೆ ಬೈದು ಮದುವೆ ಮಾಡದೇ ತಿರುಗಾಡುತ್ತಾನೆ ಏನಾದರೂ ಮಾಡಿಕೊಂಡು ಸಾಯಬಾರದೇ ಎಂದು ಬೈಯುವುದು ಕ್ಯಾಕರಿಸಿ ಉಗುಳುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 16.11.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ನಮ್ಮ ಮನೆಯ ಹತ್ತಿರ ಬಂದು ಆರೋಪಿ 1 ರಿಂದ 4 ರವರು ನನ್ನ ಗಂಡನಿಗೆ ಬಾಯಿಗೆ ಬಂದಂತೆ ಬೈದು ಮಗಳನ್ನು ಮದುವೆ ಮಾಡಿದರೆ ಹಣ ಖರ್ಚು ಆಗುತ್ತದೆ ಎಂದು ತಿಳಿದು ಮದುವೆ ಮಾಡದೇ ಚಂದುವಿನ ಜೊತೆಯಲ್ಲಿ ಮಗಳು ಮನೆ ಬಿಟ್ಟು ಓಡಿ ಹೋಗಲಿ

ಎಂದು ಕಾಯುತ್ತಿದ್ದೀಯಾ  ಇಂತಾ ಬಾಳು ಬಾಳುವುದಕ್ಕಿಂತ ಏನಾದರೂ ಮಾಡಿಕೊಂಡು ಸಾಯಿ ಎಂದು ಪ್ರಚೋದನೆ ಮಾಡಿ ಬೈದಿದ್ದರು ಎಂದರೆ ಸರಿಯಲ್ಲ. ಆರೋಪಿ 5 ರಿಂದ 11 ರವರು ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆರೋಪಿ 1 ರಿಂದ 4 ರವರಿಗೆ ನೀವು ಚೆನ್ನಾಗಿ ಮಾತನಾಡಿ ಏನು ಬಂದರೂ ನೋಡಿಕೊಳ್ಳುತ್ತೇವೆ ಎಂದು ಕುಮ್ಮಕ್ಕು ನೀಡಿದ್ದು ನನ್ನ ಗಂಡ ಆರೋಪಿ 1 ರಿಂದ 4 ರವರು ಮಾತನಾಡಿರುವ ಮಾತನ್ನು ಮನಸಿನಲ್ಲಿ ಇಟ್ಟುಕೊಂಡು ಮನಸ್ಸಿಗೆ ಬೇಜಾರು ಮಾಡಿಕೊಂಡು ಆರೋಪಿ–1, 3, 7 ಮತ್ತು 10 ತನ್ನ ಸಾವಿಗೆ ಕಾರಣರಿರುತ್ತಾರೆ ಎಂದು ಹೇಳಿ ನಿಪಿ–2 ರಂತೆ ಡೆತ್ ನೋಟ್ ಬರೆದು ನಮ್ಮ ಮನೆಯ ಮರದ ತೀರಿಗೆ ಪ್ಲಾಸ್ಟಿಕ್ ಚೇರ್ ಮೇಲೆ ನಿಂತುಕೊಂಡು ಪ್ಲಾಸ್ಟಿಕ್ ಹಗ್ಗದಿಂದ ನೇಣು  ಹಾಕಿಕೊಂಡು ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಇದೇ ಕಾರಣಕ್ಕಾಗಿ ನಾನು  ನಿಪಿ–1 ರಂತೆ ಆರೋಪಿತರ ವಿರುದ್ದವಾಗಿ  ದೂರು ಕೊಟ್ಟಿದ್ದೆ ಎಂದರೆ ಸರಿಯಲ್ಲ ಮತ್ತು ಪೊಲೀಸರಿಗೆ ನಿಪಿ–3 ರ ಡೈರಿಯನ್ನು ಕೊಟ್ಟಿದ್ದು ಆ ಡೈರಿಯನ್ನು ನಿಪಿ–5 ರಂತೆ ಪೊಲೀಸರು ಅಮಾನತ್ತು ಪಡಿಸಿಕೊಂಡು ನಿಪಿ–4 ರಂತೆ ನೊಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ನಿಪಿ–6 ರಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ ಮತ್ತು ಈಗ ಓದಿ ಹೇಳಿದ ನಿಪಿ–7 ರಂತೆ ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾವು ಮತ್ತು ಆರೋಪಿತರು ನ್ಯಾಯಾಲಯದ ಹೊರಗೆ ರಾಜೀ ಆಗಿ ಅವರಿಗೆ

ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**